# ನಗರಸಭೆ ಚಿಕ್ಕಮಗಳೂರು

ನಂ:ಸಿ.ಎಂಸಿ: ಆರ್‌ಎಸ್ (3) :ಸಿಆರ್ 74:03-04 ದಿನಾಂಕ: 29-03-06

**<u>ಸಾರ್ವಜನಿಕ ಪ್ರಕಟಣೆ</u>**

ಈ ಮೂಲಕ ಆಸ್ತಿ ತೆರಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ,

2002-2003 ನೇ ಸಾಲಿನಿಂದ ಸ್ವಯಂ ಘೋಷಿತ ಆಸ್ತಿ ಪದ್ಧತಿಯು ಕರ್ನಾಟಕ ಆದ್ಯಾದೇಶ ಸಂಖ್ಯೆ 3 ರ ಕರ್ನಾಟಕ ಪುರಸಭೆಗಳ ಕಾಯಿದೆ (ತಿದ್ದುಪಡಿ) 2004 ರ ಮೂಲಕ ಜಾರಿಗೆ ಬಂದಿರುತ್ತದೆ ಮುಂದುವರಿದು ಸರ್ಕಾರದ ಅಧಿಸೂಚನೆ ಸಂಖ್ಯೆ 44, ದಿನಾಂಕ:7-3-2005 ರ ಪ್ರಕಾರ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಪೌನಿ:ಎಸ್‌ಎಎಸ್: 56/05-06 ದಿನಾಂಕ 2-9-2005 ರ ಮೂಲಕ ವಿಶ್ಲೇಷಿಸಿದಂತೆ 2005-06 ನೇ ಸಾಲಿಗೆ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ದಿನಾಂಕ 7-11-2005 ರ ನಗರಸಭಾ ತೀರ್ಮಾನದಂತೆ ಕರ್ನಾಟಕ ಮುದ್ರಾಂಕ ಕಾಯಿದೆ 1957 ರ ಕಲಂ 45 (ಬಿ) ರಂತೆ <u>ಕಟ್ಟಡದ ಮಾರುಕಟ್ಟೆ ಬೆಲೆಯ ಶೇ 50 ಕ್ಕೆ ಅಪಮೌಲ್ಯಗೊಳಿಸಿ</u> ಈ ಕೆಳಕಂಡಂತೆ ನಿಗಧಿ ಮಾಡಲು ನಿರ್ಣಯಿಸಲಾಗಿತ್ತು.

ವಾಸದ ಮನೆ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 0.7

ವಾಣಿಜ್ಯ ಕಟ್ಟಡದ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 1.5

ದಿನಾಂಕ: 29/3/06 ರಂದು ನಗರಸಭಾ ಅಧಿವೇಶನದಲ್ಲಿ ಮೆಲ್ಕಂಡ ತೆರಿಗೆ ದರ, ಆಸ್ತಿ ತೆರಿಗೆದಾರರಿಗೆ ಹೊರೆಯಾಗುತ್ತದೆ ಎಂದು ಚರ್ಚಿಸಿ ಈ ಕೆಳಕಂಡಂತೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಿಸಿ ನಿರ್ಣಯಿಸಿರುತ್ತದೆ. ಈ ದರವು 2005-06 ರಿಂದ 2007-08 ರ ಸಾಲಿನ ವರೆಗೆ( 3 ವರ್ಷಗಳ ಅವಧಿಗೆ) ಜಾರಿಯಲ್ಲಿರುತ್ತದೆ.

1. ವಾಸದ ಮನೆ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 0.50 (ಶೇಕಡ)
2. ವಾಣಿಜ್ಯ ಕಟ್ಟಡದ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 1.00 (ಶೇಕಡ)
3. ಕೈಗಾರಿಕ ಕಟ್ಟಡದ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 0.75 (ಶೇಕಡ)
4. ಖಾಲಿ ನಿವೇಶನದ ತೆರಿಗೆ: ಕಟ್ಟಡದ ವಿಸ್ತೀರ್ಣ (ಚ.ಅ.ಗಳಲ್ಲಿ)X $\frac{\text{ಮಾರುಕಟ್ಟೆ ಬೆಲೆ}}{2}$ x 0.10 (ಶೇಕಡ)

ದಂತೆ ನಿಗದಿ ಪಡಿಸಿ ಮೇಲ್ಕಂಡ ಎಲ್ಲ ತೆರಿಗೆಗಳನ್ನು 2005-06 ನೇ ಸಾಲಿನಿಂದ ನಗರಸಭ ನಿರ್ಣಯದಂತೆ ಜಾರಿಗೊಳ್ಳಿಸಲಾಗಿದೆ.

ಆದುದರಿಂದ ಆಸ್ತಿ ತೆರಿಗೆದಾರರು ಹಿಂದಿನ ತೆರಿಗೆ ದರ ವಾಸದ ಮನೆಗೆ ಶೇಕಡ 0.30, ವಾಣಿಜ್ಯ ಕಟ್ಟಡಕ್ಕೆ ಶೇಕಡ 0.50, ಕೈಗಾರಿಕಾ ಕಟ್ಟಡದ ದರ ಶೇಕಡ 0.35,ಹಾಗೂ ಖಾಲಿ ನಿವೇಶನಕ್ಕೆ ಶೇಕಡ 0.10 ರಂತೆ, 2002-03, 2003-04, 2004-05 ರ ವರೆಗಿನ ಬಾಕಿ ಇರುವ ಎಸ್. ಎ.ಎಸ್ ಆಸ್ತಿ ತೆರಿಗೆಯನ್ನು ಹಿಂದಿನ ದರದಂತೆ ಶೇಕಡ 2 ರ ಬಡ್ಡಿ ದರದಂತೆ ಹಾಗೂ 2005-06 ನೇ ಸಾಲಿನ ತೆರಿಗೆಯ ಮೇಲ್ಕಂಡ ಪರಿಷ್ಕೃತ ದರದಂತೆ ಪಾವತಿಸಲು ವಿನಂತಿಸಿದೆ.

ಆದುದರಿಂದ ನಗರದ ಆಸ್ತಿ ತೆರಿಗೆದಾರರು ತಮ್ಮ ತಮ್ಮ ಸ್ವತ್ತುಗಳ 2005-06 ರ ಸಾಲಿನ ತೆರಿಗೆಯನ್ನು ಕೂಡಲೇ ಪಾವತಿ ದಂಡ, ಬಡ್ಡಿಯಿಂದ ದೂರವಿರಲು, ನಗರಸಭೆಯ ಆದಾಯ ವೃದ್ಧಿ ಮಾಡಿ ನಗರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರ ನೀಡಲು ಕೊರಲಾಗಿದೆ.

ಸಿ.ವಿ. ಧರ್ಮರಾಜ್
ಅಧ್ಯಕ್ಷರು,
ನಗರಸಭೆ, ಚಿಕ್ಕಮಗಳೂರು.

ಎಸ್. ಗುರುಲಿಂಗಪ್ಪ, ಕೆ.ಎಂ.ಎ.ಎಸ್.,
ಪೌರಾಯುಕ್ತರು,
ನಗರಸಭೆ, ಚಿಕ್ಕಮಗಳೂರು.

Document Produced by deskPDF Unregistered :: http://www.docudesk.com